ನಯಾಗರ ಎಂಬ ಜಲಧಾರೆಯ ವೈಭವದ ಬಗ್ಗೆ ಬಾಲ್ಯದಿಂದಲೂ ಕೇಳಿ ತಿಳಿದಿದ್ದಷ್ಟೆ. ಅದನ್ನು ನೋಡಬೇಕೆಂಬ ಕನಸನ್ನೂ ಕಂಡಿದ್ದವನಲ್ಲ. ‘ನಾನೆಲ್ಲೋ, ನಯಾಗರವೆಲ್ಲೋ…’ ಎಂದು ಅದರೆಡೆಗೆ ಯೋಚನೆ ಕೂಡ ಮಾಡಿರಲಿಲ್ಲ. ಆದರೆ ನಯಾಗರ ನೋಡುವ ಅವಕಾಶ ಅನಿರೀಕ್ಷಿತವಾಗಿ ಒದಗಿಬಂದಿತು.

ನನ್ನ ಮಗ ಎಂಟು ವರ್ಷಗಳಿಂದ ಕ್ಯಾಲಿಫೋರ್ನಿಯಾದಲ್ಲಿದ್ದರೂ ಅವನು ಕೂಡ ನಯಾಗರ ನೋಡಿರಲಿಲ್ಲ. ಕ್ಯಾಲಿಫೋರ್ನಿಯಾ, ಅಮೆರಿಕ ದೇಶದ ಪಶ್ಚಿಮ ಬದಿಯಲ್ಲಾದರೆ, ನಯಾಗರ ಪೂರ್ವ ಬದಿಯಲ್ಲಿದೆ. ದೇಶ ಒಂದೇ ಆದರೂ ಎರಡಕ್ಕೂ 2600 ಮೈಲುಗಳ ಅಂತರ. ಇದು ಭಾರತದಿಂದ ರಷ್ಯಾಗೋ ಜಪಾನಿಗೋ ಇರುವಷ್ಟು ದೂರ. ಈ ಮಧ್ಯೆ ಕ್ಯಾಲಿಫೋರ್ನಿಯಾದಲ್ಲಿನ ಮಗನ ಮನೆಗೆ ಹೋದಾಗ ನಯಾಗರಕ್ಕೆ ಹೋಗುವ ಆಸೆ ಚಿಗುರೊಡೆಯಿತು. ಮಗ–ಸೊಸೆ, ನಾನು–ಪತ್ನಿ, ನಾಲ್ವರೂ ನಯಾಗರ ಪಯಣಕ್ಕೆ ಅಣಿಯಾದೆವು.

ಕ್ಯಾಲಿಫೋರ್ನಿಯಾದ ಸ್ಯಾನ್‌ಫ್ರಾನ್ಸಿಸ್ಕೊ ವಿಮಾನ ನಿಲ್ದಾಣದಿಂದ ಬಫೆಲೊ ವಿಮಾನ ನಿಲ್ದಾಣಕ್ಕೆ ಆರೇಳು ಗಂಟೆಗಳ ಪ್ರಯಾಣ. ಪೂರ್ವ ನಿಯೋಜಿತ ಕಾರು ಪಡೆದು ಬಫೆಲೊ ನಗರದ ನಯಾಗರ ಫಾಲ್ಸ್ ಪಟ್ಟಣದಲ್ಲಿ ತಂಗಲು ಮುಂಚೆಯೇ ನಿಗದಿಪಡಿಸಿದ್ದ ಮನೆ ಪ್ರವೇಶಿಸಿದಾಗ ರಾತ್ರಿ 9. ನಾವು ಉಳಿದುಕೊಂಡ ಮನೆಯಿಂದ ಕೇವಲ ಎರಡು ಮೈಲು ದೂರದಲ್ಲಿ ನಯಾಗರ ಜಲಪಾತ. ಇದನ್ನು ತಿಳಿದೇ ಮನಸ್ಸು ನೀರಧಾರೆಯಂತಾಗಿತ್ತು.


ಆ ಮನೆಯ ಸನಿಹವೇ ಅಮೆರಿಕ–ಕೆನಡಾ ದೇಶಗಳ ಅಂತರರಾಷ್ಟ್ರೀಯ ಗಡಿ. ಈ ದೇಶಗಳ ನಡುವಿನ ಗಡಿರೇಖೆ ಜಗತ್ತಿನಲ್ಲೇ ಅತಿ ಉದ್ದವಂತೆ. ಅಂದರೆ, 3987 ಮೈಲು. ಗಡಿಯುದ್ದಕ್ಕೂ ಇರುವ ನೂರಕ್ಕೂ ಹೆಚ್ಚು ಕೆನಡಾ ಪ್ರವೇಶ ದ್ವಾರಗಳಲ್ಲಿ ಒಂದನ್ನು, ನಾವು ಉಳಿದಿದ್ದ ಮನೆಯ ಸನಿಹದಲ್ಲೇ ಕಂಡೆವು.

ಅಂದು ದಿನವಿಡೀ ಅಲ್ಲಿನ ನಿಸರ್ಗ ವೈಭವವನ್ನು ಕಣ್ಮನಗಳಲ್ಲಿ ತುಂಬಿಕೊಳ್ಳುವುದೇ ನಮ್ಮ ಯೋಜನೆ. ಗಿಡ, ಮರ, ಹುಲ್ಲುಗಾವಲುಗಳಿಂದ ಶೋಭಿಸುವ ವಿಶಾಲ ಸ್ಟೇಟ್ ಪಾರ್ಕ್ ಹಾದು, ವಿಸಿಟರ್ ಸೆಂಟರಿನಲ್ಲಿ ಮಾಹಿತಿ ಪತ್ರ–ಟಿಕೆಟ್‌ಗಳನ್ನು ಪಡೆದೆವು. ಪ್ರವಾಸಿಗರ ಆಕರ್ಷಣೆಯ ಸ್ಥಳಗಳ, ಇರುವ ಅನುಕೂಲಗಳ ಎಲ್ಲ ವಿವರಗಳು ಕರಪತ್ರದಲ್ಲಿ ಇದ್ದವು. ಬೆಳಿಗ್ಗೆಯಿಂದ ರಾತ್ರಿವರೆಗೆ ನೋಡಲೇಬೇಕಾದ ಸ್ಥಳಗಳ ಬಗ್ಗೆ ನಿರ್ಧಾರಕ್ಕೆ ಬಂದೆವು.

## ಮೂರು ಜಲಪಾತಗಳಿಂದ ಸೃಷ್ಟಿ

ನಯಾಗರ ರೂಪು ತಳೆದಿರುವುದು ಮೂರು ಜಲಪಾತಗಳಿಂದ: ಒಂದೇ ಸಾಲಿನಲ್ಲಿರುವ ‘ಅಮೆರಿಕನ್ ಫಾಲ್ಸ್’, ‘ಬ್ರೈಡಲ್ ವೇಯ್ಲ್ ಫಾಲ್ಸ್’, ‘ಹಾರ್ಸ್ ಶೂ ಫಾಲ್ಸ್’ (ಕೆನಡಿಯನ್ ಫಾಲ್ಸ್) ಜಲಧಾರೆಗಳಿಂದ. ಹಾರ್ಸ್ ಶೂ ಫಾಲ್ಸ್ ಎಲ್ಲಕ್ಕಿಂತ ದೊಡ್ಡದು, ಇದು ಇರುವುದು ಕೆನಡಾ ನೆಲದಲ್ಲಿ. ಉಳಿದವೆರಡು ಅಮೆರಿಕ ನೆಲದಲ್ಲಿ. ಬ್ರೈಡಲ್ ವೇಯ್ಲ್ ಫಾಲ್ಸ್, ಗಾತ್ರದಲ್ಲಿ ಮೂರರ ಪೈಕಿ ಚಿಕ್ಕದು. ಮೂರನ್ನೂ ಅಮೆರಿಕ ನೆಲದಲ್ಲೇ ನಿಂತು ನೋಡಬಹುದು. ಮೂರು ಜಲಪಾತಗಳ ಒಟ್ಟಂದದ ಎದುರಿನ ನೋಟ ಕಾಣಸಿಗುವುದು ಕೆನಡಾ ನೆಲದಿಂದ. ಆದರೂ ಅವುಗಳ ಮೇಲಿನ, ಕೆಳಗಿನ ಹಾಗೂ ಪಾರ್ಶ್ವ ನೋಟಗಳಿಗೆ ಅಮೆರಿಕ ನೆಲದಿಂದ ಕೊರತೆ ಇಲ್ಲ.

ನಯಾಗರ ಜಲಪಾತಗಳಿಗೆ ಕಾರಣವಾದ



ಬಣ್ಣಗಳಲ್ಲಿ ಮಿಂದ ನಯಾಗರ ಜಲಧಾರೆಯ ಇರುಳ ಸೊಬಗು